Reg. No. [ | | | | | | | | ]

**BASKAL 103/BSWKAL 103**

**ಗುಣಾಂಕ ಆಧಾರಿತ ಮೊದಲನೆಯ ಚತುರ್ಮಾಸ ಬಿ.ಎ./ಬಿ.ಎಸ್.ಡಬ್ಲ್ಯೂ.**
**ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2016**
**(Common to all Batches)**
**ಕನ್ನಡ**
**ಕನ್ನಡ ಭಾಷಾ ಪತ್ರಿಕೆ –1**

Time : 3 Hours Max. Marks : 80

## ಭಾಗ – 1 : ಕಾವ್ಯ

I. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ : **(1×8 = 8)**

1) ಧರ್ಮಾರ್ಜುನ ಕಲಹಕ್ಕೆ ಕಾರಣವೇನು ? ಶ್ರೀಕೃಷ್ಣನು ನಿವಾರಿಸಿದ ರೀತಿಯನ್ನು ಸಂಗ್ರಹಿಸಿರಿ.

2) 'ಇಂದ್ರಪ್ರಸ್ಥ' – ಕವನದಲ್ಲಿ ಪ್ರಕೃತಿಯ ನಾಶದೊಂದಿಗೆ ನಾಗರೀಕತೆ ಹುಟ್ಟುವ ಪರಿಯನ್ನು ಸಂಗ್ರಹಿಸಿ ಬರೆಯಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5 = 5)**

1) 'ನನ್ನ ಅವತಾರ' – ಕವನದ ಆಶಯವನ್ನು ಬರೆಯಿರಿ.

2) 'ಅಗ್ನಿಪರ್ವ' – ಕವನದಲ್ಲಿ ವ್ಯಕ್ತವಾಗುವ ಕವಿಯ ಆಕ್ರೋಶವನ್ನು ಪರಿಚಯಿಸಿರಿ.

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : **(2×3=6)**

1) ಕೆ.ಎಸ್. ನಿಸಾರ್ ಅಹಮದ್.

2) ಸತ್ಯಾನಂದ ಪಾತ್ರೋಟ.

3) ಅಲ್ಲಮಪ್ರಭು ಬೆಟ್ಟದೂರು.

II. ಅ) ಒಂದು ಪದ್ಯ ಭಾಗದ ಸಂದರ್ಭ ಸೂಚಿಸಿ ಮಹತ್ವವನ್ನು ವಿವೇಚಿಸಿರಿ. **(1×5=5)**

1) ನೆತ್ತು ಕೊಟ್ಟಳು ಹರಿಗ, ಅತ್ತು ಬಿಟ್ಟಳು ಮರೆಗೆ
ಪತಿಯ ನಿತ್ತಳು ಕೊಡುಗೆ ದೇವನಡಿಗೆ
ಹೆಣ್ಣು ಮಾಯೆಯ ನೆರಳೇ ? ಹೆಣ್ಣು ಗಂಡಿನ ಮರುಳೆ ?
ಹೇಳಲೆದೆ ಉಂಟೇನು ಹಾಗಿವಳಿಗೆ ?

P.T.O.

2) ನಾಯಕರು ಓಡುತ್ತಾರೆ
ನಾಡಕಟ್ಟಲು ತುತ್ತೂರಿ
ಕೆರೆ, ಕಾಲುವೆ, ಅಣೆಕಟ್ಟೆ
ಅಲ್ಲಲ್ಲಿಯೇ ಉಳಿದು
ನಾಡ ದಾರಿಗಳೆಲ್ಲ ಅಡ್ಡಾಡಿ ಆಗಿ
ನಾಡು ಚಲಿಸುತ್ತಿಲ್ಲ
ನಾಡಿನ ನಾಡಿ ಮಿಡಿಯುತ್ತಿಲ್ಲ.

ಆ) ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ. **(2×3=6)**

1) ಆಸೆಯೆನಗೀ ರಾಜ್ಯದಲಿ ಮೋಣೀ ಶರೀರದಲಿಲ್ಲ.
2) ನಾವು ಕಲ್ಲು ಒಡೆಯುತ್ತೇವೆ, ಯಾರಿಗೂ ಕಲ್ಲು ಹೊಡೆಯುವುದಿಲ್ಲ.
3) ಎಲ್ಲೆ ಎಲ್ಲವ ದಾಟಿ ನಡೆಯುತ್ತಾಳೆ ನಿರಂತರ.

III. ಒಂದೊಂದು ಪದ/ವಾಕ್ಯದಲ್ಲಿ ಉತ್ತರಿಸಿರಿ : **(5×1=5)**

1) 'ಮುರಾಂತಕ' – ಎಂದರೆ ಯಾರು ?
2) ಪುರಂದರ ದಾಸರ ಮೂಲ ಹೆಸರೇನು ?
3) 'ಭೂಮಿಗೀತ' – ಇದು ಯಾರ ಕವನ ಸಂಕಲನ ?
4) 'ಎಚ್ಚರ' – ಇದು ಯಾರು ಬರೆದ ಕವನ ?
5) ಅರ್ಜುನ ಸುಟ್ಟ ಕಾಡಿನ ಹೆಸರೇನು ?

## ಭಾಗ – 2 : ಗದ್ಯ

IV. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ : **(1×8 = 8)**

1) 'ಕಮಲ ಪುರದ ಹೋಟೆಲ್ಲಿನಲ್ಲಿ' – ಕತೆಯ ಸ್ವಾರಸ್ಯವನ್ನು ಸಂಗ್ರಹಿಸಿರಿ.
2) 'ತಿರುಕಣ್ಣನ ಮತದಾನ' – ಕತೆಯು ಈಗಿನ ಮತದಾನಕ್ಕೆ ಹಿಡಿದ ಕನ್ನಡಿ ಹೇಗೆ ? ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ : **(1×8 = 8)**

1) ಕರ್ನಾಟಕದ ಸಂಸ್ಕೃತಿ ಸಂವರ್ಧನೆಯಲ್ಲಿ ಮಹಿಳೆಯರ ಪಾತ್ರವೇನು ? ಪಠ್ಯದ ಹಿನ್ನೆಲೆಯಲ್ಲಿ ಸಂಗ್ರಹಿಸಿರಿ.
2) ನಿಕ್ ಜಸಿಕ್ ಯಾರು ? ಅವನು ಯುವಜನಾಂಗಕ್ಕೆ ನೀಡುವ ಸಂದೇಶವೇನು ? ವಿವರಿಸಿರಿ.

ಇ) ಒಂದು ಪ್ರಶ್ನೆಗೆ ಉತ್ತರಿಸಿರಿ : **(1×5 = 5)**

1) ಜೀವನೋತ್ಸಾಹ ತುಂಬಿದ ಹುಡುಗ ರಾಮುವಿನ ಪಾತ್ರ ಚಿತ್ರಣ ನೀಡಿ.
2) ಸಂಸ್ಕೃತಿಯ ಬಗ್ಗೆ ಡಿ.ವಿ.ಜಿ. ಮತ್ತು ಬಿ.ಎಂ. ಶ್ರೀಕಂಠಯ್ಯನವರ ಅಭಿಪ್ರಾಯವನ್ನು ಸಂಗ್ರಹಿಸಿರಿ.

V. ಒಂದಕ್ಕೆ ಸುಮಾರು ಒಂದು ಪುಟದಷ್ಟು ಟಿಪ್ಪಣಿ ಬರೆಯಿರಿ. **(1×5=5)**

1) ''ಮತದಾನದ ಮಹತ್ವ''.
2) ''ಯುವಜನತೆ ಮತ್ತು ಸಂಸ್ಕೃತಿ''.
3) ''ದಾಂಪತ್ಯದ ವಿರಸದಿಂದ ಮಕ್ಕಳ ಮೇಲಾಗುವ ಪರಿಣಾಮ''.

VI. ಒಂದೊಂದು ಪದ/ ವಾಕ್ಯದಲ್ಲಿ ಉತ್ತರಿಸಿರಿ : **(4×1=4)**

1) ಕನ್ನಡದ ಮೊದಲ ಸಣ್ಣಕತೆ ಯಾವುದು ?
2) ಆರೋಗ್ಯಮ್ಮನ ಗಂಡ ಯಾರು ?
3) ವಿಷ್ಣುವರ್ಧನನ ಪಟ್ಟ ಮಹಿಷಿ ಯಾರು ?
4) ಬೌದ್ಧಾಯನ ಕೃತಿಯ ಲೇಖಕರು ಯಾರು ?

## ಭಾಗ – 3 : ಕ್ರಿಯಾತ್ಮಕ ಕನ್ನಡ

VII. ಒಂದು ಪ್ರಶ್ನೆಗೆ ಉತ್ತರಿಸಿರಿ : **(1×8 = 8)**

1) ಗಾದೆಗಳ ಲಕ್ಷಣವನ್ನು ಉದಾಹರಣೆಯೊಂದಿಗೆ ಪರಿಚಯಿಸಿರಿ.
2) ಆಡಳಿತ ಪತ್ರ ಎಂದರೇನು / ಅದರ ವಿವಿಧಾಂಗಗಳನ್ನು ವಿವರಿಸಿರಿ.

VIII. ಒಂದು ಪ್ರಶ್ನೆಗೆ ಉತ್ತರಿಸಿರಿ : **(1×5 = 5)**

1) 'ದೇಶ ಸುತ್ತು ಕೋಶ ಓದು' – ಈ ಗಾದೆಯನ್ನು ವಿಸ್ತರಿಸಿ ಬರೆಯಿರಿ.
2) ಅರೆ ಸರ್ಕಾರಿ ಪತ್ರದ ಮಾದರಿಯನ್ನು ಪರಿಚಯಿಸಿರಿ.

IX. ಒಂದೊಂದು ಪದ/ ವಾಕ್ಯದಲ್ಲಿ ಉತ್ತರಿಸಿರಿ : **(2×1=2)**

1) 'Proverb' ಪದಕ್ಕೆ ಸಂವಾದಿಯಾದ ಕನ್ನಡ ಪದ ಯಾವುದು ?
2) ಸುತ್ತೋಲೆಯನ್ನು ಇಂಗ್ಲೀಷಿನಲ್ಲಿ ಏನೆಂದು ಕರೆಯುತ್ತಾರೆ ?

---